ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್ (1)/2025

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:23.04.2025

**ಜ್ಞಾಪನ**

ವಿಷಯ: ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ **ಎಟಿಎಸ್ ಶೀಟ್** ಗಳನ್ನು ಮುದ್ರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/03/ಇಸಿಎಸ್(1)/2025 ದಿ: 22.04.2025

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಸುತ್ತೋಲೆಯನ್ವಯ ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳಿಗಾಗಿ ಮುಖ್ಯ ವೀಕ್ಷಕರನ್ನು ನೇಮಿಸಿ, ಪರೀಕ್ಷಾ ದಿನದಂದು ಪ್ರಶ್ನೆ ಪತ್ರಿಕೆ ಮುದ್ರಣ ಕುರಿತು ಸೂಚನೆಗಳನ್ನು ನೀಡಿ, ಮುಖ್ಯವೀಕ್ಷಕರು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಮತ್ತು ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳ ಸಮನ್ವತೆಯೊಂದಿಗೆ ಆಯಾ ದಿನಕ್ಕೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಾತ್ರ Online ಪ್ರಶ್ನೆ ಪತ್ರಿಕೆಗಳನ್ನು, ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಮುದ್ರಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿತ್ತು.

ಮುಂದುವರೆದು, ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ನಿಗದಿತ ಪರೀಕ್ಷಾ ಸಮಯದಲ್ಲಿ Online ಮೂಲಕ ಶೀಘ್ರವಾಗಿ ಮುದ್ರಿಸಲು ಅನುಕೂಲವಾಗುವಂತೆ, **ಪ್ರತಿ ಪರೀಕ್ಷಾ ದಿನದ ಹಿಂದಿನ ದಿನವೇ ATS Sheet ಗಳನ್ನು ಮುದ್ರಿಸಿಟ್ಟುಕೊಂಡು, ಪರೀಕ್ಷಾ ದಿನದಂದು ಬಿಟಿಇ ಲಿಂಕ್ಸ್ ಪೋರ್ಟಲ್ ನಲ್ಲಿ ನಿಗದಿತ ಸಮಯದಲ್ಲಿ ಸುಸೂತ್ರವಾಗಿ ಪ್ರಶ್ನೆ ಪತ್ರಿಕೆಯನ್ನು ಮುದ್ರಿಸಲು ಕ್ರಮಕೈಗೊಳ್ಳುವಂತೆ** ಸಂಬಂಧಿಸಿದ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಹಾಗೂ ಮುಖ್ಯ ವೀಕ್ಷಕರುಗಳು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ ,
ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ,ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಹಾಗೂ ಮುಖ್ಯ ವೀಕ್ಷಕರುಗಳು – ಅಗತ್ಯ ಕ್ರಮಕ್ಕಾಗಿ

ಪ್ರತಿ:

1. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್ – ಮಾಹಿತಿಗಾಗಿ
2. ಇ-ಗವರ್ನೆನ್ಸ್ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
3. ಗಣಕ ಕೇಂದ್ರ- ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
4. ನಿರ್ದೇಶಕರ ಆಪ್ತಶಾಖೆ.